ದಿನಾಂಕಃ 15–02–2019 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋದಿಸಲಾಯಿತು.

–ಃಃ ಪಾಟೀ ಸವಾಲುಃ ಶ್ರೀ ಎಸ್ ಕೆ ಆರ್ 01 ನೇ ಪ್ರತಿವಾದಿ ಪರ ವಕೀಲರಿಂದ ಃಃ –

ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ . ನಾನು ಭಾಗ ಬೇಕು ಎಂದು ದಾವೆ ಹಾಕಿರುತ್ತೇನೆ . ನಾನು ಈಗ ಬಳ್ಳಾರಿಯಲ್ಲಿ ವಾಸವಾಗಿರುತ್ತೇನೆ. ನಾನು ಮನೆಯಲ್ಲಿ ಇರುತ್ತೇನೆ ಯಾವುದೇ ಕೆಲಸ ಮಾಡುತ್ತಿಲ್ಲ . ನಾನು ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗವನ್ನು ಖಾಸಾಗಿ ಕಾಲೇಜಿನಲ್ಲಿ ಉಪನ್ಯಾಸಕಿ ಎಂದು ಬರೆಸಿದ್ದೆನೆಂದರೆ ಸಾಕ್ಷಿ ಆ ವೃತ್ತಿ ಬಿಟ್ಟು ಈಗ ಒಂದು ವರ್ಷ ಆಗಿದೆ ಎಂದು ಹೇಳುತ್ತಾರೆ . ಆ ರೀತಿಯಾಗಿ ನಾನು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ .

ನನ್ನ ಮದುವೆಯಾಗಿ ಈಗ 8 ವರ್ಷ ಆಗಿರುತ್ತದೆ. ನನ್ನ ಮದುವೆ ದೇವಸ್ಥಾನದಲ್ಲಿ ಆಗಿರುತ್ತದೆ. ನನ್ನ ತಂದೆ ಖರ್ಚು ಮಾಡಿಲ್ಲ. 1 ನೇ ಪ್ರತಿವಾದಿಯು ನನ್ನ ಮದುವೆ ಖರ್ಚನ್ನು ನೋಡಿಕೊಂಡಿದ್ದಾರೆಂದು ಹೇಳುವುದು ಸುಳ್ಳು. ನನ್ನ ಮದುವೆಗೆ ತಂದೆ ತಾಯಿ ಹಾಜರಿರಲಿಲ್ಲ ಆರತಕ್ಷತೆಗೆ ಹಾಜರಿದ್ದರು ಎಂದು ಹೇಳುತ್ತಾರೆ . ನನ್ನ ತಂದೆಯು ಮದುವೆಗೆ 8–10 ಲಕ್ಷ ರೂ ಖರ್ಚು ಮಾಡಿ ಅವರೇ ನೆರವೆರಿಸಿರುತ್ತಾರೆಂದರೆ ಸರಿಯಲ್ಲ.

ನನ್ನ ತಂದೆ ಅವರು ಮಹಾರಾಷ್ಟ್ರ ರಾಜ್ಯದಲ್ಲಿ ಪಿ ಡಬ್ಲೂ ಡಿ ಇಲಾಖೆಯಲ್ಲಿ ಸೆಕ್ಷನ್ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತಾರೆ. ಅವರಿಗೆ ಸಂಬಳ ಸಾಕಷ್ಟು ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . ದಾವಾ ಸ್ವತ್ತು 02 ಇದನ್ನು ನನ್ನ ತಂದೆ ಅವರ ಸಂಬಳದಿಂದ ಬಂದ ಹಣದಿಂದ ಸ್ವಯಾರ್ಜಿತವಾಗಿ ಖರೀದಿಸಿದ್ದಾರೆಂದರೆ ಸಾಕ್ಷಿ ಹೊಲದ ಆದಾಯದಿಂದ ಖರೀದಿ ಮಾಡಿದ್ದಾರೆಂದು ಹೇಳುತ್ತಾರೆ. ದಾವಾ ಸ್ವತ್ತು 1 ಮತ್ತು 3 ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಇವರು ನನ್ನ ತಂದೆಗೆ 2 ನೇ ಹೆಂಡತಿ ಎಂದರೆ ಹೌದು ಮೊದಲನೇ ಹೆಂಡತಿ ತೀರಿಕೊಂಡ ನಂತರ ನನ್ನ ತಾಯಿಯನ್ನು ಮದುವೆಯಾಗಿದ್ದಾರೆಂದು ಹೇಳುತ್ತಾರೆ ಅವರ ಮೊದಲನೇ ಹೆಂಡತಿ ಹೆಸರು ಗೌರಮ್ಮ . ಗೌರಮ್ಮ ಇವರ ಮೂಲಕ ಈ ಕೇಸಿನ 2 ನೇ ಪ್ರತಿವಾದಿ ಹಾಗು ಸಂಗೀತಾ ಎನ್ನುವ ಮಕ್ಕಳು ಜನಿಸಿರುತ್ತಾರೆ. ಸಂಗೀತಾ ತೀರಿಕೊಂಡಿರುತ್ತಾರೆ

ದಾವಾಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದರಿಂದ 2 ನೇ ಪ್ರತಿವಾದಿ ಹೆಸರಿಗೆ ದಿಃ 12–3–2015 ಹಾಗು 19–6–2015 ರಂದು ದಾನ ಪತ್ರ ಮಾಡಿ ಕೊಟ್ಟಿದ್ದಾರೆಂದರೆ ದಾನ ಪತ್ರ ಮಾಡಿದ್ದಾರೆ ಆದರೆ ಅದು ಪಿತ್ರಾರ್ಜಿತ ಸ್ವತ್ತು ಎಂದು ಹೇಳುತ್ತಾರೆ . ದಾನ ಪತ್ರ ಆಗುವ ಸಮಯದಲ್ಲಿ ನಾನು ಹಾಜರಿದ್ದೆ ಹಾಗು ಆ ಸಮಯದಲ್ಲಿ 5 ಲಕ್ಷ ರೂ ಪಡೆದಿರುತ್ತೇನೆಂದು ಸೂಚಿಸುವುದು ಸುಳ್ಳು .

ನಾನು ಎಂ ಟೆಕ್ ಓದಿರುತ್ತೇನೆ . ವಿದ್ಯಾಭ್ಯಾಸಕ್ಕೆ ನನ್ನ ತಂದೆ ಖರ್ಚು ನೋಡಿದ್ದಾರೆಂದರೆ ಸರಿ .ನಾನು 2015 ರಲ್ಲಿ ನನ್ನ ತಂದೆ ಕಡೆಯಿಂದ 5 ಲಕ್ಷ ರೂ ಹಣವನ್ನು ಪಡೆದು ಆಸ್ತಿಗಳಲ್ಲಿ ಯಾವುದೇ ಹಕ್ಕು ಬೇಡ ಎಂದು ಮೌಖಿಕವಾಗಿ ಹೇಳಿದ್ದೆ ಎಂದರೆ ಸರಿಯಲ್ಲ . 2 ನೇ ಪ್ರತಿವಾದಿ ಈಗ ಹೊರದೇಶದಲ್ಲಿ ಇದ್ದಾರೆ ಯಾವ ದೇಶ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . ಅವರು ಕ್ಯಾಲಿಫೋರ್ನಿಯದಲ್ಲಿ ಇರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ ಆಸ್ತಿಯ ವಿಚಾರವಾಗಿ ಅವರ ಕಡೆಯಿಂದಲೂ ಹಣ ಪಡೆದಿದ್ದೆನೆಂದು ಹೇಳುವುದು ಸರಿಯಲ್ಲ . ನನಗೆ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರು ಸಹ ಸುಳ್ಳು ದಾವೆ ಹಾಕಿದ್ದೆನೆಂದರೆ ಸರಿಯಲ್ಲ .

ಸರ್ವೆ ನಂಃ 98/1 ಇದು 6 ಎಕರೆ 32 ಗುಂಟೆ ಮೇಟಿಕುರ್ಕೆಯಲ್ಲಿ ಇದೆ . ಸರ್ವೆ ನಂಃ 94/6 ಇದು 4 ಎಕರೆ 16 ಗುಂಟೆ ಮೇಟಿಕುರ್ಕೆ ಗ್ರಾಮದಲ್ಲಿದೆ .ಅವುಗಳ ಚಕ್ಕುಬಂದಿ ನನಗೆ ಹೇಳಲು ಗೊತ್ತಾಗುವುದಿಲ್ಲ . ದಾವಾ ಸ್ವತ್ತು 01 ಮತ್ತು 2 ನನ್ನ ಅಣ್ಣನ ಹೆಸರಿನಲ್ಲಿದೆ . ದಾವಾ ಸ್ವತ್ತು 03 ನನ್ನ ತಂದೆ ಹೆಸರಿನಲ್ಲಿದೆ . ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ .

ಪಾಟೀಸವಾಲುಃ 2 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಹಿರಿಯೂರು